# ಟಿವಿಗೆ ಮರಳಿದ ದಿವ್ಯಾ ಉರುಡುಗ

ಕಲಾವಿದರಿಗೆ ಸಿನಿಮಾ ಆಗಲಿ ಕಿರುತೆರೆ ಆಗಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದರೆ, ಕಿರುತೆರೆ ನಟ, ನಟಿಯರು ಪ್ರೇಕ್ಷಕರಿಗೆ ಬಹಳ ಬೇಗ ಹತ್ತಿರವಾಗುತ್ತಾರೆ. ಕಿರುತೆರೆ ಮತ್ತು ಬೆಳ್ಳಿತೆರೆ ಒಂದಕ್ಕೊಂದು ಸಂಬಂಧವಿರುವುದಂತೂ ನಿಜ. ಕಿರುತೆರೆಯಲ್ಲಿ ಮಿಂಚಿದವರು ಬಹುಬೇಗನೆ ಸಿನಿಮಾ ರಂಗವನ್ನು ಪ್ರವೇಶಿಸುತ್ತಾರೆ. ಅಂತಹ ಬಹಳಷ್ಟು ಉದಾಹರಣೆಗಳು ಇವೆ. ಅದರಲ್ಲೊಬ್ಬರು ಪ್ರತಿಭಾವಂತ ಕಲಾವಿದೆ ದಿವ್ಯಾ ಉರುಡುಗ.

ಈ ಎರಡೂ ಕ್ಷೇತ್ರಗಳ ಮುಖ್ಯ ಉದ್ದೇಶ ಪ್ರೇಕ್ಷಕರ ಮನರಂಜನೆ ಆಗಿರುವುದರಿಂದ ಕಲಾವಿದರು ಬಹಳ ಬೇಗನೆ ಕಿರುತೆರೆ ಅಥವಾ ಹಿರಿತೆರೆ ಬಗ್ಗೆ ಆಸಕ್ತಿ ತೋರುತ್ತಾರೆ. ಇಂತಹ ಅವಕಾಶಗಳು ದಿವ್ಯಾ ಅವರನ್ನು ಹುಡುಕಿಕೊಂಡು ಬಂದಿವೆ. ಈಗಾಗಲೇ ಸಿನಿಮಾ ಹಾಗೂ ರಿಯಾಲಿಟಿ ಶೋನಲ್ಲಿ ಮನರಂಜನೆ ನೀಡಿರುವ ದಿವ್ಯಾ ಉರುಡುಗ ಅವರು 'ಕಲರ್ಸ್ ಕನ್ನಡ ವಾಹಿನಿ' ಮೂಲಕ ಕಿರುತೆರೆಗೆ ಪುನರಾಗಮನ ಮಾಡಿದ್ದಾರೆ. ಜೈ ಮಾತಾ ಕಂಬೈನ್ಸ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ 'ನಿನಗಾಗಿ' ಧಾರಾವಾಹಿಯಲ್ಲಿ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಧಾರಾವಾಹಿಯ ಸೂಪರ್ ಸ್ಟಾರ್ ದಿವ್ಯಾ ಉರುಡುಗ ಎಂತಲೇ ಹೇಳಬೇಕಾಗಿದೆ. ಕಥೆಯಲ್ಲಿ ಬರುವ ರಚ್ಚು ಅಥವಾ ರಚನಾ ಪಾತ್ರ ಇಡೀ ಸೀರಿಯಲ್ ಅನ್ನು ಆವರಿಸಿಕೊಂಡಿದೆ. ಈ ಬಗ್ಗೆ ದಿವ್ಯಾ ಉರುಡುಗ ಮಾತನಾಡಿ ಹೀಗೆ. ತಮ್ಮ ಹೊಸ ಧಾರಾವಾಹಿ ಬಗ್ಗೆ ಹೇಳಬೇಕೆಂದರೆ ಇದೊಂದು ಹೆಮ್ಮೆಯ ವಿಷಯ. ಈ ಧಾರಾವಾಹಿಯ ಕಥೆಯಲ್ಲಿ ಬರುವ ಪ್ರತಿಯೊಂದು ಪಾತ್ರ ಅಚ್ಚುಕಟ್ಟಾಗಿ ಮೂಡಿಬರಲು ಬಹಳಷ್ಟು ಎಚ್ಚರಿಕೆ ವಹಿಸಿದ್ದೇವೆ. ಇನ್ನು ನನ್ನ ಪಾತ್ರದ ಬಗ್ಗೆ ಹೇಳಬೇಕೆಂದರೆ, 'ರಚ್ಚು ಅಥವಾ ರಚನಾ' ಎನ್ನುವ ಮುದ್ದಾದ ಸೆಲೆಬ್ರಿಟಿ ಹುಡುಗಿ ಪಾತ್ರ. ಒಳ್ಳೆಯ ಮನಸ್ಸಿರುವ ಹುಡುಗಿ ರಚ್ಚು. ನಿಜ ಜೀವನದಲ್ಲಿ ನಿಜವಾಗ್ಲೂ ಇಷ್ಟು ಸರಳ, ಮುಗ್ಧ ಮತ್ತು ಮೃದು ಸ್ವಭಾವದ ಹುಡುಗಿ ಇರುತ್ತಾರಾ... ಎಂದು ನಂಬಲು ಅಸಾಧ್ಯವಾದ ಪಾತ್ರ. ಎಲ್ಲರಂತೆ ರಸ್ತೆಯಲ್ಲಿ ಓಡಾಡಬೇಕು, ಪಾನಿಪುರಿ ತಿನ್ನಬೇಕು, ಸಂಪ್ರದಾಯ, ಸಂಸ್ಕೃತಿಯನ್ನು ತನ್ನಲ್ಲಿ ಅಳವಡಿಸಿಕೊಳ್ಳಬೇಕು. ರಂಗೋಲಿ ಹಾಕುವುದರಿಂದ ಹಿಡಿದು ಮನೆಯ ಎಲ್ಲ ಕೆಲಸವನ್ನು ಮಾಡಬೇಕೆಂದು ಕನಸು ಕಾಣುವ ಹುಡುಗಿ ಎಂದು ಉತ್ಸಾಹದಿಂದ ವಿವರಿಸಿದರು ದಿವ್ಯಾ.



## ದಿವ್ಯಾ ಸಂದರ್ಶನ

**◆ ನಿನಗಾಗಿ ಧಾರಾವಾಹಿ ಬಗ್ಗೆ ಏನು ಹೇಳುತ್ತೀರಿ?**

ನನಗಂತೂ ಇದು ಸೀರಿಯಲ್ ಅನಿಸೋಲ್ಲ. ಒಂದು ಪೂರ್ಣ ಪ್ರಮಾಣದ ಸಿನಿಮಾ ಅನಿಸುತ್ತೆ. ತುಂಬಾ ಖುಷಿ ಇದೆ. ಯಾಕೆಂದರೆ, ರಚ್ಚು ಪಾತ್ರಧಾರಿ ಬಹಳಷ್ಟು ನಟಿಯರನ್ನು ಪ್ರತಿನಿಧಿಸುತ್ತಾಳೆ. ನಮ್ಮ ಸಮಾಜ ನೋಡೋ ನೋಟದಲ್ಲಿ ನಟ, ನಟಿಯರೆಂದರೆ ಬೇರೆ ಕಲ್ಪನೆ ಇರುತ್ತದೆ. ಅವರ ಜೀವನ ಸುಂದರ ಹಾಗೂ ಬಿಂದಾಸ್ ಆಗಿರುತ್ತದೆ ಅಂದುಕೊಳ್ಳುತ್ತಾರೆ. ಆದರೆ, ಎಷ್ಟೊಂದು ಸಲ ಅದು ನಿಜ ಆಗಿರಲ್ಲ. ನೈಜ ಜಗತ್ತೇ ಬೇರೆಯಾಗಿರುತ್ತೆ. ಇಲ್ಲಿ ರಚನಾ ಪಾತ್ರ ಎಲ್ಲರೂ ಮೆಚ್ಚುವಂತಿದೆ ಎಂಬುದು ಸಂತೋಷಕರ ಸಂಗತಿ.

**◆ ಕಲರ್ಸ್ ಕನ್ನಡ ವಾಹಿನಿ ಬಗ್ಗೆ ಏನು ಹೇಳಲು ಬಯಸುತ್ತೀರಾ?**

ಕಲರ್ಸ್ ಕನ್ನಡ ನನಗೆ ತವರು ಮನೆ ಇದ್ದಂತೆ. ನನಗೆ ಕೆರಿಯರ್ ಮತ್ತು ಲೈಫ್ ಅನ್ನು ಕಟ್ಟಿಕೊಟ್ಟಿದೆ. ಈ ವಾಹಿನಿ ಬಗ್ಗೆ ನನಗೆ ಕೃತಜ್ಞತೆ ಇದೆ. ಇಲ್ಲಿಂದ ಪ್ರಾರಂಭಿಸಿದ ವೃತ್ತಿ, ಬಿಗ್‌ಬಾಸ್‌ನಲ್ಲಿ ಹೆಸರು ತಂದುಕೊಟ್ಟಿತು. ಆಮೇಲೆ ಸಾಕಷ್ಟು ಸಿನಿಮಾಗಳು ಸಿಕ್ಕವು. ಕಲರ್ಸ್ ಕನ್ನಡ ನನ್ನನ್ನು ಪ್ರೀತಿಯಿಂದ ಸಾಕಿ ಬೆಳೆಸಿದೆ.

**◆ ಬಿಗ್‌ಬಾಸ್ ಎರಡು ಸೀಸನ್‌ನಲ್ಲಿ ಪಾಲ್ಗೊಂಡಿದ್ದೀರಿ. ಆ ಬಗ್ಗೆ ನಿಮ್ಮ ಅಭಿಪ್ರಾಯ?**

ಬಿಗ್‌ಬಾಸ್ ನನಗೆ ಬಹಳ ಕಲಿಸಿಕೊಟ್ಟಿದೆ. ನನ್ನನ್ನು ನಾನು ಅರಿತುಕೊಳ್ಳುವಂತೆ ಮತ್ತು ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದೆ. ನನ್ನ ಸ್ವಭಾವ ಹೀಗೆ ಇದೆ, ಇರುತ್ತದೆ ಎಂಬುದನ್ನು ಬಿಂಬಿಸಿದೆ. ಅಲ್ಲಿ ನೀಡಿದ ಟಾಸ್ಕ್‌ಗಳು ನನ್ನ ಸ್ಕಿಲ್ ಹೆಚ್ಚಿಗೆ ಆಗಲು ಸಹಾಯ ಮಾಡಿವೆ. ನಾನು ನಾನಾಗಿರಲು ಬಿಗ್‌ಬಾಸ್ ವೇದಿಕೆ ಪ್ರೋತ್ಸಾಹಿಸಿದೆ. ದಿವ್ಯಾ ಉರುಡುಗ ಗುಣಗಳನ್ನು ಜನರು, ಪ್ರೇಕ್ಷಕರು ಇಷ್ಟ ಪಟ್ಟಿದ್ದಾರೆ.

**◆ ರಚ್ಚು ಪಾತ್ರ ನೀಡುವ ಮೆಸೇಜ್ ಏನು?**

ರಚ್ಚು ಒಂದು ಸೂಪರ್‌ಸ್ಟಾರ್ ಪಾತ್ರ. ಯಾವುದೇ ಕಲ್ಮಶವಿಲ್ಲದ ಹುಡುಗಿ. ಸೆಲೆಬ್ರಿಟಿ ಆಗಿದ್ದರೂ ಸರಳ ಜೀವನ ಇಷ್ಟ ಪಡುವ ಪಾತ್ರ. ಆ ಪಾತ್ರಕ್ಕೂ ಒಂದು ಮನಸ್ಸಿದೆ. ತನ್ನದೇ ಆದ ಆಸೆ, ಆಕಾಂಕ್ಷೆಗಳಿರುತ್ತವೆ. ಹಿರಿಯರು, ಕಿರಿಯರು ಅಂದರೆ ಗೌರವ. ತಾಯಿ ಎಂದರೆ ಪಂಚಪ್ರಾಣ. ನಟನೆ ಇಷ್ಟವಿಲ್ಲ, ಅಮ್ಮನಿಗೋಸ್ಕರ ತ್ಯಾಗ ಮಾಡುವ ಪಾತ್ರ. ಇಂತಹವರು ಇರುತ್ತಾರಾ ಎನಿಸುವ ಪಾತ್ರ. ಎಲ್ಲರೂ ಇಷ್ಟಪಡುವ ಹಾಗೂ ಈ ರೀತಿ ಇರಬೇಕೆಂಬ ಹೊಸ ಆಯಾಮ ಸೃಷ್ಟಿಸಿರುವ ಪಾತ್ರ.

**◆ ಯಾವ ರೀತಿ ಪಾತ್ರಗಳು ನಿಮ್ಮನ್ನು ಸೆಳೆಯುತ್ತವೆ?**

ನನಗೆ ಯಾವುದಾದರೂ ಸರಿ. ಈ ತರಹ, ಆ ತರಹ ಪಾತ್ರ ಬೇಕು ಎಂಬುದೇನೂ ಇಲ್ಲ. ಆದರೆ, ಇಂಪ್ಯಾಕ್ಟ್ ಆಗುವಂತಿರಬೇಕು ಅಷ್ಟೇ. ಸ್ವೀಟ್, ಕ್ಯೂಟ್, ಸರಳ, ಮುಗ್ಧ ಹುಡುಗಿಯಾಗಿರಲಿ ಅಂತ ಪ್ರೇಕ್ಷಕರು ಬಯಸುತ್ತಾರೆ. ಆದ್ದರಿಂದ ವಿಲನ್ ಅಥವಾ ಸೂಪರ್ ಹೀರೋಯಿನ್ ಆಗಬೇಕು ಅಂತ ನಾನು ಬಯಸಲ್ಲ.

**◆ ಸೀರಿಯಲ್, ಸಿನಿಮಾ ಬಿಟ್ಟು ನಿಮ್ಮ ಕನಸುಗಳು?**

ಅಭಿನಯದ ಜತೆ ನನ್ನ ಅಂತಿಮ ಗುರಿ ನನ್ನವರು ಮತ್ತು ನನ್ನನ್ನು ನಂಬಿರುವವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆನ್ನುವುದು. ಕಿರುತೆರೆ, ಹಿರಿತೆರೆ ಎನ್ನದೆ ಜನರಿಗೆ ಮನರಂಜನೆ ನೀಡಬೇಕು ಎಂಬುದು ನನ್ನ ಇಚ್ಛೆ.